# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.264-2018** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಬಸವರಾಜನಾಯ್ಕ<br>ಕುಪ್ಪರವಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-02-2023. |

**ಪಾಟೀ ಸವಾಲುಃ ಶ್ರೀ ಎಂ.ಆರ್.ಎಸ್ ವಕೀಲರಿಂದಃ**

ನಾನು 2012 ರಲ್ಲಿಯೂ ಸಹ ಪ್ರತಿವಾದಿಗಳ ವಿರುದ್ಧ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿಗಳು ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಗಳ ನಡುವೆ ಚಾಮನಾಯ್ಕನ ಆಸ್ತಿಗೆ ಸಂಬಂಧಪಟ್ಟಂತೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.439/2012 ರಂತೆ ನನ್ನ ವಿರುದ್ಧವೇ ದಾವ ಸಲ್ಲಿಸಿದ್ದರು ಎಂದರೆ ಸರಿ. ವಾದಿಗಳು ಚಾಮುಂಡನಾಯ್ಕನ ಮಕ್ಕಳಲ್ಲ ಎಂದರೆ ಸರಿಯಲ್ಲ. ಚಾಮುಂಡನಾಯ್ಕನಿಗೆ ಒಬ್ಬಳೇ ಹೆಂಡತಿ ರಂಗಮ್ಮ ಎಂದರೆ ನನಗೆ ಗೊತ್ತಿಲ್ಲ. ಪುಟ್ಟತಾಯಮ್ಮ ಚಾಮುಂಡನಾಯ್ಕನ 2 ನೇ ಹೆಂಡತಿ ಎಂದರೆ ಸರಿ. ರಂಗಮ್ಮ ಚಾಮುಂಡನಾಯ್ಕನ ಮೊದಲನೆ ಹೆಂಡತಿ ಎಂದರೆ ಸರಿ. ಚಾಮುಂಡನಾಯ್ಕ ರಂಗಮ್ಮನವರ ಜೊತೆಯಲ್ಲೇ ಇದ್ದು ಪುಟ್ಟತಾಯಮ್ಮ ನವರನ್ನು ಮದುವೆ ಆಗಿಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಚಾಮುಂಡನಾಯ್ಕ ಪುಟ್ಟತಾಯಮ್ಮನವರ ಜೊತೆಯಲ್ಲಿಯೇ ಇದ್ದರೂ ಎಂದು ನುಡಿಯುತ್ತಾರೆ. ವಾದಿಗಳು ಚಾಮುಂಡನಾಯ್ಕನ ಮಕ್ಕಳು ಅಲ್ಲ ಎಂದರೆ ಗೊತ್ತಿಲ್ಲ. ನನಗೆ ಖುದ್ದಾಗಿ ವಾದಿಗಳು ಚಾಮುಂಡನಾಯ್ಕನ ಮಕ್ಕಳು ಎಂದು ಗೊತ್ತಿರುವುದಿಲ್ಲ, ನನ್ನ ತಂದೆ ವಾದಿಗಳನ್ನು ಚಾಮುಂಡನಾಯ್ಕನ ಮಕ್ಕಳು ಎಂದು ಹೇಳಿದ್ದರಿಂದ ನಾನು ಅದೇ ರೀತಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಮುಂಡನಾಯ್ಕ ಅಲ್ಲತ್ತೂರುಹುಂಡಿಯಲ್ಲಿ ಮರಣ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಚಾಮುಂಡನಾಯ್ಕನ ಅಂತ್ಯ ಸಂಸ್ಕಾರವು ಹೊಸಕೋಟೆಯಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗಳು ಮತ್ತು ಅವರ ತಾಯಿ ರಂಗಮ್ಮ ನವರು ಹೊಸಕೋಟೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಚಾಮುಂಡನಾಯ್ಕ ಆಲತ್ತೂರು ವಾಸವಾಗಿರಲಿಲ್ಲ

ಹೊಸಕೋಟೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಾನು ವಾದಿಗಳ ಮಾತುಕೇಳಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**